DBA – 010

# ಪ್ರಥಮ ಬಿ.ಬಿ.ಎಂ. ಪದವಿ ಪರೀಕ್ಷೆ, ಸೆಪ್ಟಂಬರ್/ಅಕ್ಟೋಬರ್ 2012
## ಅಂಚೆ ಮತ್ತು ತೆರಪಿನ ಶಿಕ್ಷಣ
## Directorate of Distance Education
## ಕನ್ನಡ ಭಾಷಾ ಪತ್ರಿಕೆ – ೧
**(ಪಠ್ಯಗಳು : ಪ್ರಾಚೀನ ಕನ್ನಡ ಕಾವ್ಯ – ೨, ಹೊಸಗನ್ನಡ ಕಾವ್ಯ – ೨, ಹೊಸಗನ್ನಡ ಕಥಾ ಸಾಹಿತ್ಯ – ೧, ಹೊಸಗನ್ನಡ ಪ್ರಬಂಧ ಸಾಹಿತ್ಯ – ೧, ಬಳಕೆಯ ಭಾಷೆ)**

ಸಮಯ : 3 ಗಂಟೆಗಳು ಅಂಕಗಳು : 70/80

1. ಅ) **ಒಂದರ** ಭಾವ ಸ್ವಾರಸ್ಯವನ್ನು ವಿವರಿಸಿ : **4**

   ೧) ಜನಕಂಗೆ ಜಲಾಂಜಲಿಯಂ
   ತನೂಭವಂ ಕುಡುವುದುಚಿತಮದುಗೆಟ್ಟೀಗಳ್
   ನಿನಗಾಂ ಕುಡುವಂತಾದುದೆ
   ತನೂಜ ನೀಂ ಕ್ರಮವಿಪರ್ಯಯಂ ಮಾಡುವುದೇ

   ೨) ಚಂದಮಾಮನ ಅಳಿಯ, ಬೆಕ್ಕು ನಾಯಿಯ ಗೆಳೆಯ
   ನಮ್ಮ ಲೋಕದ ತಿಳಿವಿನಾಚೆಯವನು
   ಅವನ ನೀತಿಯೆ ಬೇರೆ, ಅವನ ನಿಯತಿಯೆ ಬೇರೆ
   ದೇವಲೋಕದ ಬೆಳಕ ಹಿಡಿಯುವವನು.

   ಆ) **ಎಂಟು** ಪದಗಳಿಗೆ ಅರ್ಥ ಬರೆಯಿರಿ : **4**

   ಧೂರ್ಜಟಿ, ಗಳಿತ, ಹರಿಣ, ತರಕ್ಷು, ನೇಹ, ಜೀಮೂತ, ಕಾಫರ್, ರಸನೆ, ಇಗ್ಗಾಲು, ಅವಧೂತ.

   ಇ) **ಎರಡಕ್ಕೆ** ಟಿಪ್ಪಣಿ ಬರೆಯಿರಿ : **4**

   1) ಉದಯ ಭಾನು 2) ಸಂಬಳಿ ಗೋಲು 3) ಕರ್ಣ.

2. **ನಾಲ್ಕಕ್ಕೆ** ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ಬರೆಯಿರಿ. **12**
   1) ಇದ್ದವರಿಗೊಂದು ಮನೆ ಇಲ್ಲದವರಿಗೆ ನೂರು
   2) ಇವನ ಮಾತಿನ ಅರ್ಥ ದೇವರೇ ಬಲ್ಲ ಭಾವಗೀತಗಳಂತೆ ಅಸ್ಪಷ್ಟವಲ್ಲ!
   3) ಮರಿಯು ನಮ್ಮ ಬಿಂಕವರಿತು ಹೊರಗೆ ನಿಲುವುದು ಹೊಸಿಲ ದಾಟದು!
   4) ಆಗಸ ನೀರೊಳಗಿರ್ದು ಬಾಯಾರಿ ಸತ್ತಂತೆ
   5) ಪೆತ್ತ ಪರೀಷಹ ಜಯಮೆ ತಪಂ ತಪಕೆ ಬೇಱಿಕೋಡೆರಡೊಳವೇ
   6) ನಿನ್ನ ಪೆತ್ತಳ್ ಮೊಲೆವೆತ್ತಳೆ ವೀರಜನನಿವೆಸರುಂ ಪೆತ್ತಳ್

P.T.O.

3. ೧) ಕರ್ಣ–ದುರ್ಯೋಧನರ ನಡುವಿನ ಸ್ನೇಹವನ್ನು ರನ್ನ ಕವಿ ಹೇಗೆ ಅಭಿವ್ಯಕ್ತಿಸಿದ್ದಾನೆ– ವಿವೇಚಿಸಿ. **8**

**ಅಥವಾ**

೨) ವಸಂತದ ವರ್ಣನೆ ಮಾರಿಜಾತ್ರೆಯ ಹಿಂಸೆಗೆ ಹೇಗೆ ಪೂರಕವಾಗಿದೆ– ವಿವರಿಸಿ.

4. ೧) ತಂದೆ ಮತ್ತು ಮಗ ಇಬ್ಬರೂ ರಂಗೋಲಿಯ ಬಗ್ಗೆ ವ್ಯಕ್ತ ಪಡಿಸುವ ಪ್ರಕ್ರಿಯೆಗಳನ್ನು ವಿವೇಚಿಸಿ. **8**

**ಅಥವಾ**

೨) 'ನನ್ನ ನಾಯಿ' ಕವನದ ವಸ್ತುವನ್ನು ನಿರೂಪಿಸಿ.

5. ೧) ಅಮಾಸ ಕಥೆಯ ಸ್ವಾರಸ್ಯವನ್ನು ಕುರಿತು ಬರೆಯಿರಿ. **10**

**ಅಥವಾ**

೨) 'ಉಗ್ರಪ್ಪನ ಉಗಾದಿ' ಸ್ವಾತಂತ್ರ್ಯ ಪೂರ್ವ ಗ್ರಾಮೀಣ ಪರಿಸ್ಥಿತಿಗಳ ಚಿತ್ರಣವೆ ಚರ್ಚಿಸಿ.

6. ೧) ಹರಕೆಗಳು ಎಂದರೇನು ? ಹರಕೆಗಳು ಮೂಢನಂಬಿಕೆಯೇ ? ಸ್ಪಷ್ಟಪಡಿಸಿ. **10**

**ಅಥವಾ**

೨) ಕನ್ನಡ ಸಂಸ್ಕೃತಿಯ ಬಗೆಗೆ ನಾವು ಹೆಮ್ಮೆ ಪಡಬೇಕಾದುದು ಏಕೆ ? ವಿವರಿಸಿ.

7. ಅ) ವಾಣಿಜ್ಯ ಭಾಷೆ ಎಂದರೇನು ? ವಿವರಿಸಿ. **2**

ಆ) ಒಂದು ಮಾದರಿ ಸಾಮಾನ್ಯ ಪತ್ರವನ್ನು ಬರೆಯಿರಿ. **3**

8. ಅ) ವಿಮಾ ಪತ್ರ ಎಂದರೇನು ? **2**

ಆ) ಮಣ್ಣಿನಿಂದ ಕೌರವ ಕೆಟ್ಟ, ಹೆಣ್ಣಿನಿಂದ ರಾವಣ ಕೆಟ್ಟ– ಈ ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ. **3**

**(80 ಅಂಕಗಳ ಸ್ಕೀಂನವರಿಗೆ ಕಡ್ಡಾಯ ಪ್ರಶ್ನೆ)**

9. ಯಾವುದಾದರೂ **ಒಂದು** ಪ್ರಶ್ನೆಗೆ ಉತ್ತರಿಸಿ : **10**

ಅ) ಚಿಲಿಪಿಲಿ ಗಾನಕ್ಕೆ ಬೆಲೆ ಕೊಡಬೇಕಾದುದು ಏಕೆ ? ವಿವರಿಸಿ.

ಆ) ದೆವ್ವಗಳು ಇಲ್ಲ ಎನ್ನುವುದನ್ನು ವೈಜ್ಞಾನಿಕವಾಗಿ ಡಾ. ಕೋವೂರ್ ಸಿದ್ಧಮಾಡಿ ತೋರಿಸಿದ ಬಗೆ ಹೇಗೆ ? ವಿವರಿಸಿ.